# ಕೃಷಿಖಾತಾ ಕೃಷಿ ಸಾಲ ಸ್ನೇಹಿತ



**ಕೃಷಿ ಪೂರಕವಾಗಿ ರೈತರಿಗೆ ಸಮಯಕ್ಕೆ ಸರಿಯಾಗಿ ಸಾಲ ಒದಗಿಸುವುದು ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಸ್ಥೆಗಳ ಪ್ರಮುಖ ಕರ್ತವ್ಯ. ಹೀಗೆ ಸಿಕ್ಕ ಸಾಲ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಸಾಲ ಸೌಲಭ್ಯವನ್ನು ಇನ್ನಷ್ಟು ಸಲೀಸಾಗಿ ಸಿಗುವಂತೆ ಮಾಡಲು ಅಗ್ರಿಫೈ ಮುಂದಾಗಿದೆ.**

**■ ಶಶಿಕುಮಾರ್ ಸಿ.**

ಎಲ್ಲ ರಾಷ್ಟ್ರೀಕೃತ ಬ್ಯಾಂಕ್‌ಗಳು ಹಾಗೂ ಸಹಕಾರಿ ಸಂಸ್ಥೆಗಳು ಕಡ್ಡಾಯವಾಗಿ ರೈತರಿಗೆ ಕೃಷಿ ಸಾಲ ನೀಡಲೇಬೇಕು ಎನ್ನುವ ಗುರಿಯನ್ನು ಸರ್ಕಾರ ನಿಗದಿಪಡಿಸಿದೆ. ಆದರೂ ನಾನಾ ಕಾರಣಗಳಿಂದ ರೈತರಿಗೆ ಬ್ಯಾಂಕ್‌ಗಳಿಂದ ಹಾಗೂ ಸಹಕಾರಿ ಸಂಸ್ಥೆಗಳಿಂದ ಸಕಾಲಕ್ಕೆ ಸರಿಯಾಗಿ ಕೃಷಿ ಸಾಲ ಸೌಲಭ್ಯ ಸಿಗುತ್ತಿಲ್ಲ. ಹೀಗಾಗಿ, ಅರ್ಹ ಕೃಷಿಕರು ಆರ್ಥಿಕ ಸಮಸ್ಯೆಯಿಂದಾಗಿ ಕೃಷಿ ಉತ್ಪಾದನೆಯಲ್ಲಿ ತೊಡುಗುವುದರಿಂದ ವಂಚಿತರಾಗುತ್ತಿದ್ದಾರೆ. ಇದು ದೇಶದೆಲ್ಲೆಡೆ ಸದ್ಯ ಚಾಲ್ತಿಯಲ್ಲಿರುವ ಸಮಸ್ಯೆ.

ರೈತರನ್ನು ಕಾಡುತ್ತಿರುವ ಈ ಸಮಸ್ಯೆಯನ್ನು ಹೋಗಲಾಡಿಸಿ ಅರ್ಹ ಕೃಷಿಕರಿಗೆ ಕೃಷಿ ಸಾಲ ಸಿಗುವಂತೆ ಮಾಡಲು ಬೆಂಗಳೂರಿನ ಅಗ್ರಿಫೈ ಕಂಪನಿಯು ಮುಂದಾಗಿದ್ದು, ಅದಕ್ಕಾಗಿ ಕೃಷಿಖಾತಾ ಆ್ಯಪ್ ಅಭಿವೃದ್ಧಿಪಡಿಸಿದೆ. ಇದು ಎಂಟು ಭಾಷೆಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಲಾಗಿನ್ ಆಗಬೇಕು. ಲೋನ್ ಅಗತ್ಯವಿದ್ದವರು ಆ್ಯಪ್‌ನಲ್ಲಿ ಅಗತ್ಯ ಮಾಹಿತಿ ನಮೂದಿಸಬೇಕು. ನಂತರ ಕಂಪನಿಯ ಸಿಬ್ಬಂದಿಯು ರೈತರಿಂದ ಇನ್ನಷ್ಟು ಮಾಹಿತಿ ಸಂಗ್ರಹಿಸಿ ಬ್ಯಾಂಕ್‌ನೊಂದಿಗೆ ಮಾತುಕತೆ ನಡೆಸಿ ರೈತರಿಗೆ ಕೃಷಿ ಸಾಲ ದೊರಕುವಂತೆ ಮಾಡುತ್ತಾರೆ. ಈ ವ್ಯವಸ್ಥೆಯ ಹಿಂದೆ ಕಂಪನಿಯ ಸಂಸ್ಥಾಪಕ ಅಭಿಲಾಶ್ ತಿರುಪತಿ, ಸಹ ಸಂಸ್ಥಾಪಕರಾದ ರಘುಚಂದ್ರ ಮತ್ತು ಮಿತಿಲೇಶ್ ಕುಮಾರ್ ಇದ್ದಾರೆ.

ಕಂಪನಿಯು ರಾಸಾಯನಿಕ ಔಷಧಿ ಪೂರೈಸುವ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅವುಗಳ ಉತ್ಪನ್ನಗಳನ್ನು ಸ್ಥಳೀಯ ಮಟ್ಟದಲ್ಲಿ ಒದಗಿಸುವ ವ್ಯವಸ್ಥೆಯನ್ನು ಹೊಂದಿವೆ. ಅದರಂತೆ ರೈತರು ತಮಗೆ ಬೇಕಾದ ಔಷಧಿಗಳಿಗೆ ಆ್ಯಪ್ ಮೂಲಕ ಬೇಡಿಕೆ ಇಟ್ಟರೆ ಅಗ್ರಿಫೈ ಸಿಬ್ಬಂದಿ ಅವುಗಳನ್ನು ರೈತನಿರುವಲ್ಲಿಗೆ ತಂದು ಕೊಡುತ್ತವೆ. ಅದಕ್ಕೆ ಡೆಲಿವರಿ ಚಾರ್ಜ್ ವಿಧಿಸಲಾಗುತ್ತದೆ. ಒಂದು ವೇಳೆ ಕಂಪನಿಯ ಸ್ಥಳೀಯ ಮಟ್ಟದ ಡೆಲಿವರಿ ಪಾಯಿಂಟ್‌ಗೆ ಹೋಗಿ ರೈತರೇ ಔಷಧಿಗಳನ್ನು ಮತ್ತು ಗೊಬ್ಬರವನ್ನು ಸ್ವೀಕರಿಸುವುದಾದರೆ ಅದಕ್ಕೂ ಕಂಪನಿಯ ಸಮ್ಮತವಿದೆ. ಇದರಿಂದ ರೈತರಿಗೆ ಡೆಲಿವರಿ ಚಾರ್ಜ್ ಭರಿಸುವುದು ತಪ್ಪುತ್ತದೆ. ಸ್ಥಳೀಯ ಮಾರಾಟದ ಬೆಲೆಗಿಂತ ಕಡಿಮೆ ಮೊತ್ತದಲ್ಲಿ ಎಲ್ಲ ರೀತಿಯ ಔಷಧಿಗಳನ್ನು ಅಗ್ರಿಫೈ ರೈತರಿಗೆ ಪೂರೈಸುತ್ತದೆ.

## ಕೃಷಿ ಸಾಲ ಒದಗಿಸುವುದು ಹೇಗೆ?

ಕೃಷಿಖಾತಾ ಆ್ಯಪ್‌ನಲ್ಲಿ ರೈತರು ತಾಲ್ಲೂಕು, ಗ್ರಾಮ, ಜಮೀನಿನ ಸರ್ವೆ ನಂಬರ್ ಮಾಹಿತಿ ದಾಖಲಿಸಿದರೆ ಸಾಕು. ಅವರದ್ದೊಂದು ಪ್ರೊಫೈಲ್ ಸಿದ್ಧವಾಗುತ್ತದೆ. ಆ ಬಳಿಕ ಅಗತ್ಯವಾದ ಕೆವೈಸಿ ಪಡೆಯಲಾಗುತ್ತದೆ. ಇದರ ಆಧಾರದ ಮೇಲೆ ಅಗ್ರಿಫೈ ಪ್ರತಿನಿಧಿಗಳೇ ನಿಮ್ಮ ವಿವರಗಳನ್ನು ಬ್ಯಾಂಕ್‌ಗಳಿಗೆ ಸಲ್ಲಿಸಿ ನಿಮಗೆ ಸುಲಭವಾಗಿ ಬ್ಯಾಂಕ್ ಸಾಲ ಸಿಗುವಂತೆ ಮಾಡುತ್ತಾರೆ.

ಎನ್‌ಪಿಎ (ವಸೂಲಿಯಾಗದ ಸಾಲ) ಭಯದಿಂದ ಬ್ಯಾಂಕ್‌ಗಳು ರೈತರಿಗೆ ಸಾಲ ನೀಡಲು ಹಿಂದೇಟು ಹಾಕುತ್ತವೆ. ಕಾರಣ ಕೃಷಿ ಸಾಲಕ್ಕಾಗಿಯೇ ಸಿಬಿಲ್ ಸ್ಕೋರ್ ವ್ಯವಸ್ಥೆ ಇಲ್ಲ. ಇಂತಹ ರೈತರ ವ್ಯವಹಾರವನ್ನು ವ್ಯವಸ್ಥಿತವಾಗಿಸುವ ಮೂಲಕ ಬ್ಯಾಂಕ್‌ಗಳ ಮನವೊಲಿಸುವ ಕೆಲಸವನ್ನು ಅಗ್ರಿಫೈ ಮಾಡುತ್ತದೆ. ರೈತರ ಒಟ್ಟಾರೆ ಜಮೀನು ಎಷ್ಟಿದೆ, ಅದರಲ್ಲಿ ಯಾವ ಬೆಳೆ ಬೆಳೆಯುತ್ತಾರೆ, ಅದರ ಒಟ್ಟಾರೆ ಖರ್ಚು ಎಷ್ಟು, ಒಂದು ಬೆಳೆಗೆ ರೈತ ಮಾಡಿದ ಖರ್ಚು ವೆಚ್ಚಗಳು ಎಷ್ಟು, ಯಾವ ಮೂಲಗಳಿಂದ ಖರೀದಿ ಮಾಡಿದ್ದಾನೆ ಎಂಬುದರ ದಾಖಲೆಗಳು, ಉತ್ತಮ ಫಸಲು ಬಂದಾಗ ಅದರ ಮಾರುಕಟ್ಟೆ ಮೌಲ್ಯ ಏನಾಗಿರುತ್ತದೆ. ಹೀಗೆ ರೈತನ ಎಲ್ಲ ಚಟುವಟಿಕೆಗಳನ್ನು ಆ್ಯಪ್‌ನಲ್ಲಿ ದಾಖಲಿಸಿ ಆತನ ಆರ್ಥಿಕ ಮೌಲ್ಯವನ್ನು ಹೆಚ್ಚಿಸಿ ಸಾಲ ಸಿಗುವಂತೆ ಮಾಡುತ್ತೇವೆ' ಎಂಬುದು ರಘುಚಂದ್ರ ಅಭಿಪ್ರಾಯ.

## ಔಷಧಿ, ಗೊಬ್ಬರ ಪೂರೈಕೆ

'ಅಗ್ರಿಫೈ ಕೃಷಿಕರಿಗೆ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ಕಾಲಕಾಲಕ್ಕೆ ಅಗತ್ಯವಾದಂತಹ ರಸಗೊಬ್ಬರ, ಬಿತ್ತನೆ ಬೀಜ ಒದಗಿಸುವ ಕೆಲಸವನ್ನೂ ಮಾಡುತ್ತದೆ. ಇದರಿಂದ ರೈತನ ವ್ಯವಹಾರದ ರೈತರು ತಮಗೆ ಬೇಕಾದ ರಸಗೊಬ್ಬರ, ಕ್ರಿಮಿನಾಶಕಗಳನ್ನು ಆ್ಯಪ್ ಮೂಲಕವೇ ಖರೀದಿಸಬಹುದು. ರೈತ ಒಂದು ಬೆಳೆಯ ಅವಧಿಗೆ ಎಷ್ಟು ಖರೀದಿ ಮಾಡಿದ್ದಾನೆ ಎಂಬುದರ ವಿವರವೂ ಸಿಗುತ್ತದೆ. ಇದು ಬ್ಯಾಂಕ್‌ಗಳಿಂದ ಸುಲಭವಾಗಿ ಸಾಲ ಪಡೆಯಲು ಸಹಾಯಕವಾಗುತ್ತದೆ ಎಂಬ ಉದ್ದೇಶವನ್ನು ಅಗ್ರಿಫೈ ಹೊಂದಿದೆ. ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಇದನ್ನು ಈಗಾಗಲೇ ಪ್ರಾಯೋಗಿಕವಾಗಿ ಜಾರಿ ಮಾಡಿ, ಹಲವು ರೈತರಿಗೆ ಸಾಲದ ನೆರವು ಒದಗಿಸಿದ್ದೇವೆ' ಎನ್ನುತ್ತಾರೆ ಅಭಿಲಾಶ್ ತಿರುಪತಿ.

ರೈತರಿಗೆ ಕಾಲಕಾಲಕ್ಕೆ ಹವಾಮಾನದ ಮಾಹಿತಿ, ಬೆಳೆಗೆ ಯಾವುದಾದರೂ ರೋಗ ತಗುಲಿದಾಗ ಅದಕ್ಕೆ ಯಾವ ಔಷಧ ಸಿಂಪಡಿಸಬೇಕು ಎಂಬ ಮಾಹಿತಿಯನ್ನು ಕೃಷಿ ತಜ್ಞರಿಂದ ಒದಗಿಸುವುದು, ಈ ವರ್ಷ ಯಾವ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಬಹುದು, ಈಗ ನಾಟಿ ಮಾಡಿದ ಬೆಳೆಗೆ ಮುಂದಿನ ಮೂರ್‍ನಾಲ್ಕು ತಿಂಗಳಲ್ಲಿ ಬೆಲೆ ಎಷ್ಟು ಇರಬಹುದು ಇಂತಹ ವೈಜ್ಞಾನಿಕ ಮಾಹಿತಿಗಳನ್ನು ಒದಗಿಸವು ಪ್ರಯತ್ನವನ್ನು ಕಂಪನಿಯು ಮಾಡುತ್ತಿದೆ. ■